International Journal of Kannada Research 2024; 10(1): 127-128




**International Journal of Kannada Research**
www.kannadajournal.com

**ISSN: 2454–5813**
IJKR 2024; 10(1): 127-128
© 2024 IJKR
www.kannadajournal.com
Received: 25-12-2023
Accepted: 30-01-2024

**ಡಾ.ಡಿ.ರವಿ**
ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹನಗೂಡು, ಹುಣಸೂರು ತಾ॥, ಮೈಸೂರು ಜಿಲ್ಲೆ, ಕರ್ನಾಟಕ, ಭಾರತ

**Corresponding Author:**
**ಡಾ.ಡಿ.ರವಿ**
ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹನಗೂಡು, ಹುಣಸೂರು ತಾ॥, ಮೈಸೂರು ಜಿಲ್ಲೆ, ಕರ್ನಾಟಕ, ಭಾರತ

# ಸಂಸ್ಕಾರ ಕಾದಂಬರಿಯಲ್ಲಿ ಪರಂಪರೆ ಮತ್ತು ಆಧುನಿಕತೆಯ ಸಂಘರ್ಷ

**ಡಾ.ಡಿ.ರವಿ**

**DOI:** https://doi.org/10.22271/24545813.2024.v10.i1b.949

**ಪೀಠಿಕೆ**

ಆಧುನಿಕತೆ ಎಂಬ ಕಲ್ಪನೆ ಹೆಚ್ಚು ಬಳಕೆಗೆ ಬಂದದು ಅನ್ಯ ಸಂಸ್ಕೃತಿಯ ಮೂಲಕ. ಆಧುನಿಕತೆ ಮೌಲ್ಯಗಳ, ಭೌತಿಕ ಪರಿಸರದ ಬದಲಾವಣೆಯ ಪಲ್ಲಟ. ಇದು ಆರ್ಥಿಕ ವ್ಯವಸ್ಥೆ ಮೂಲದಿಂದ ಬೇರ್ಪಟ್ಟಂತದು, ಜಾಗತೀಕರಣ, ಕೈಗಾರಿಕರಣ, ಆಧುನಿಕತೆಎಂಬುದು ಬ್ರಿಟಿಷರಿಂದ ಬಂದಂತದ್ದು ಹಾಗೂ ಒಂದು ನಿದಿಷ್ಟ ಜ್ಞಾನ ಶಾಖೆಯ ಅರ್ಥವನ್ನು ಸೂಚಿಸುತ್ತದೆ. ಪರಂಪರೆ ಎಂಬುದು ಒಂದು ಸಮುದಾಯದ ಮೌಲ್ಯಗಳು, ಆಚರಣೆಗಳು, ಸಂಪ್ರದಾಯಗಳು, ಪೀಳಿಗೆಯಿಂದ ಪೀಳಿಗೆಗೆ ಮುಂದುವರಿಸಿಕೊಂಡು ಬರುವುದನ್ನು ಪರಂಪರೆ ಎನ್ನುವರು. ಆಧುನಿಕತೆ ಎಂಬ ಹೊಸ ಜ್ಞಾನ ಪರಂಪರೆ ಎಂಬ ಹಳೆಯ ಮೌಲ್ಯಗಳ ಜೊತೆ ಮುಖಾಮುಖಿಯಾಗಿ ಅನುಸಂಧಾನದ ಜೊತೆಯಲ್ಲಿ ಸಾಗುವುದನ್ನು ಕಾಣುತ್ತೇವೆ. ಆಧುನಿಕತೆ ಮಾನವ ಪ್ರಜ್ಞೆ ಹಾಗೂ ಸಂವೇದನೆಗಳನ್ನು ನಿರ್ಣಾಯಕವಾಗಿ ಬದಲಿಸುವ ಹಕ್ಕು ಪರಂಪರೆಯಲ್ಲಿ ಪ್ರಾಪ್ತವಾಗುವುದು ಈ ಕಾದಂಬರಿಯಲ್ಲಿ ಕಂಡು ಬರುತ್ತದೆ.

ಸಂಸ್ಕಾರ ಎಂಬುದರ ಸಾಮಾನ್ಯ ಅರ್ಥ ಪಡೆಯಬೇಕಾದ ಪೂರ್ಣ ಅರ್ಥವಂತಿಕೆಯ ಬದುಕು ಅಥವಾ ತಿಳಿವಳಿಕೆ ಎಂಬುದು. ಇಲ್ಲಿ ಅರ್ಥ ಎಂಬುದು ವಾಸ್ತಾವದಲ್ಲಿ ಮನುಷ್ಯ ಅರಿಯಬೇಕಾದ ತನ್ನ ನಿಜವಾದ 'ಅಸ್ತಿತ್ವ ದ ಸ್ವರೂಪ ಯಾವುದು ಎಂಬುದನ್ನು ಅರಿಯುವ ಕ್ರಿಯೆ. ಆ ಕ್ರಿಯೆ ಕೂಡ ತಾನು ಜವಾಬ್ದಾರನಾಗುವ ಮತ್ತು ತನ್ನ ಸ್ವಂತ ಅನುಭವದಿಂದ ಪಡೆಯುವ ಮತ್ತು ತನ್ನನ್ನು ರೂಪಿಸಿಕೂಳ್ಳವ ಮಾನಸಿಕ ಸ್ಥಿತಿ. ಅದು ಪರಿಪೂರ್ಣವೆಂಬ ಧಾರ್ಮಿಕ ಅಥವಾ ಆಧ್ಯಾತ್ಮಿಕ ನಂಬಿಕೆಯ ಆಚೆಗೆ ವಾಸ್ತವನ್ನು ಅರಿಯುವ ಮತ್ತು ವಾಸ್ತವ ಪ್ರವೃತಿಗಳಿಗೆ ತೀವ್ರವಾಗಿ ಸ್ಪಂದಿಸುವ ಮತ್ತು ತೂಡಗುವ ಪ್ರಕ್ರಿಯೆ ಆಧ್ಯಾತ್ಮಿಕವಾದ ಮಡಿವಂತಿಕೆ ಬಿಟ್ಟು ಲೌಕಿಕವಾದ ಬದುಕುವಿಕೆ ಮೂಲ ಸಂವೇದಗಳಿಗೆ ತನ್ನನ್ನು ತೆರೆದುಕೂಳ್ಳುವ ಮೂಲಕ ತನ್ನ ಜವಾಬ್ದಾರಿಗೆ ಬದ್ಧವಾಗುವಿಕೆ .ಅಂದರೆ ಹೂಣೆಗಾರಿಕೆಯ ಬದ್ಧತೆ.

ಸಂಸ್ಕಾರದ ಪ್ರಾಣೇಶಾಚಾರ್ಯ ಕೇಂದ್ರ ಪ್ರತೀಕವಾದ ಮೊಲಕ ತನ್ನ ಆಸ್ತಿತ್ವದ ಪ್ರಶ್ನೆಯನ್ನು ಮುಂದುಮಾಡುತ್ತಾನೆ. ತಾನು ನಂಬಿಕೂಂಡ ನಿಷ್ಕಾಮ ಕರ್ಮ ಅಂದರೆ, ಫಲಾಪೇಕ್ಷೆಯೆಲ್ಲದೆ ಕ್ರಿಯೆಯ ಅರ್ಥಹೇನತೆಯನ್ನು ಮತ್ತು ಸನಾತನ ಮೌಲ್ಯಗಳ ಪೂಳ್ಳುತನಗಳ ಬದುಕನ್ನು ತನ್ನ ಆಸ್ತಿತ್ವವೆಂದು ತಿಳಿದ ಬಗೆಯಲ್ಲಿನ ದೋಷಗಳನ್ನು "ಸಂಸ್ಕಾರ" ಕಾದಂಬರಿ ಬಹಿರಂಗಗೂಳಿಸುತ್ತದೆ ದೂರ್ವಾಸಪುರದ ವಾತವರಣದಲ್ಲಿ ನಾರಣಪ್ಪನ ಸಾವಿನ ಮೂಲಕ ಚಲನೆ ಪಡೆಯುವ ಕಾಂದಬರಿ ನಂಬಿಕೆಯ ಮೌಲ್ಯಗಳ ಪ್ರಶ್ನಗೆ ಒಡ್ಡುತ್ತದೆ. ಸಾವು ಮೂಲತಃ ಬೌದ್ಧಿಕ ಆಸ್ತಿತ್ವದ ಪ್ರಜ್ಞೆಯನ್ನು ಇಲ್ಲವಾಗಿಸುವ ಕ್ರಿಯೆ. ಅದು ಮನುಷ್ಯನನ್ನು ತನ್ನ ಚಿಂತೆಗೆ ಬಿಡುತ್ತದೆ. ಸ್ವಭಾವದ ಪ್ರತೀಕವಾದ ನಾರಣಪ್ಪ ಸತ್ತಿದ್ದಾನೆ. ಅವನು ಬಾಹ್ಮಣ ಜಾತಿಗೆ ಸೇರಿದವನಾಗಿರುವುದರಿಂದ ಅವನ ಶವ ಸಂಸ್ಕಾರದ ಹೂನೆಯನ್ನು ಹೂರುವ ಮತ್ತು ಧರ್ಮ ಸಾರ್ಥಕವಾಗಿ ಕರ್ಮ ನಡೆಸುವ ಬಗೆ ಯಾವುದು ಯಾರು ನಡೆಸಬೇಕು ಎಂಬ ಸನಾತನ ನಂಬಿಕೆಯೂ ಕಾದಂಬರಿಕ್ರಿಯೆಯ ಆರಂಭವಾಗಿದೆ "ನಾರಣಪ್ಪನ ಶವ ಸಂಸ್ಕಾರದ ಪ್ರಶ್ನೆ ಪ್ರಾಣೇಶಚಾರ್ಯನ ಸಾಮಾಜಿಕ ಹೂಣೆಗಾರಿಕೆ ಸಂಬಂಧಪಟ್ಟ ವೈಯಕ್ತಿಕ ತನ್ನ ಮೂಲ ಪ್ರವೃತ್ತಿಗಳನ್ನು ಹತ್ತಿಕ್ಕಲಾರದೆ ತಾನು ನಂಬಿಕೊಂಡ ಸನಾತನ ಮೌಲ್ಯಗಳನ್ನು ತನ್ನಲ್ಲಿ ಆರೋಪಿಸಿಕೊಳ್ಳುವ ಪ್ರಾಣೇಶಾಚಾರ್ಯ ತನ್ನ ಹೆಂಡತಿ ಭಾಗೀರಥಿ ಬಗ್ಗೆ "ಇವಳು ರೋಗಿಯಾಗಿದ್ದರಿಂದ ನಾನು ಇನ್ನಷ್ಟು ಹದವಾದೆ ಎಂದು ತಮ್ಮ ಪಾಡಿನ ಬಗ್ಗೆ ಹಿಗ್ಗುತ್ತಾರೆ " ಆ ಮೂಲಕ ತನ್ನ ನಂಬಿಕೆಗಳ ಮತ್ತು

ಫಲಾಪೇಕ್ಷೆಯಿಲ್ಲದ ಕರ್ಮ ಮಾರ್ಗವನ್ನು ಕಂಡುಕೊಳ್ಳುವಿಕೆಯು ಅವರದಾಗಿದೆ. ಅದಕ್ಕೆ ಆಘಾತವನ್ನು ನೀಡುವ ಕ್ರಿಯೆ ನಾರಣಪ್ಪನ ಸಾವು. ಸ್ವಭಾವತಃ ಬೇರೆಯಾದರೂ ಜಾತಿಯಿಂದ ಬ್ರಾಹ್ಮಣನಾದ ನಾರಣಪ್ಪನನ್ನು ಬಿಟ್ಟಿರಲಾರದು ಎಂದು ನಂಬಿಕೊಂಡ ಬಗೆಯ ಪ್ರಾಣೇಶಾಚಾರ್ಯನಲ್ಲಿ ವಾಸ್ತವದ ನೋಟಕ್ಕೆ ದಾರಿಮಾಡಿಕೊಡುತ್ತದೆ.

ದೂರ್ವಾಸಪುರದಲ್ಲಿ ಯಾರು ನಾರಣಪ್ಪನ ಶವಸಂಸ್ಕಾರ ಮಾಡಬೇಕು ಎಂಬ ಪ್ರಶ್ನೆಗೆ ಉತ್ತರ ಹುಡುಕುವ 'ಬ್ರಾಹ್ಮಣ್ಯದ ರಕ್ಷಣೆಯನ್ನು ತನ್ನ ಕಾರ್ಯ ಮಾಡಿಕೊಂಡ' ಪ್ರಾಣೇಶಚಾರ್ಯ ದ್ವಂದ್ವಕ್ಕೆ ಒಳಗಾಗುತ್ತಾನೆ. ತಾನು ನಂಬಿಕೊಂಡ ಸನಾತನಧರ್ಮ ಗ್ರಂಥಗಳಲ್ಲಿ ಅದರ ಅರ್ಥ ಹುಡುಕಲು ಪ್ರಯತ್ನಿಸುತ್ತಾನೆ. ಅದರಲ್ಲಿ ಉತ್ತರ ಸಿಗದಿದ್ದಾಗ 'ಮಾರುತಿ'ಯಲ್ಲಿ ಉತ್ತರ ಪಡೆಯಲು ಮುಂದಾಗುತ್ತಾನೆ ಮಾರುತಿಯಿಂದಲೂ ಪ್ರಾಣೇಶಾಚಾರ್ಯನಿಗೆ ಉತ್ತರವಿಲ್ಲ. ದೇವರು ಸತ್ತಿದ್ದಾನೆ ಎಂಬ ಅಸ್ತಿತ್ವವಾದಿ ನೆಲೆಯ ಕ್ರಿಯೆಯು ಇಲ್ಲಿ ಪ್ರಧಾನವಾಗಿದೆ. ತನ್ನ ಮೂಲ ನಂಬಿಕೆಗಳು ಮತ್ತು ಮೌಲ್ಯಗಳು ಸುಳ್ಳಾಗತೊಡಗಿದಾಗ, ಅದರ ಅರಿವನ್ನು ಪೂರ್ಣ ಮನದಟ್ಟು ಮಾಡಿಕೊಡುವ ಕ್ರಿಯೆ ಚಂದ್ರಿ ಮತ್ತು ಪ್ರಾಣೇಶಾಚಾರ್ಯರ ಆಕಸ್ಮಿಕ ಸಮಾಗಮ. "ಆಚಾರ್ಯರಿಗೆ ಇಷ್ಟು ಹೊತ್ತೂ ಮನಸ್ಸಿಗೆ ಬಾರದಿದ್ದ ಹೊಟ್ಟೆಯ ಹಸಿವು ಜಗ್ಗನೆ ಎದ್ದು, ಸಂಕಟವಾಗಿ ಅಮ್ಮ ಎಂದರು." ಇದು ಅವರ ಉದಾತ್ತ ನಂಬಿಕೆಯ ಆದರ್ಶದ ನೆಲೆಯಿಂದ ಅವರೊಳಗೆ ಅಡಗಿದ್ದ ಸಾಮನ್ಯ ಸ್ವಭಾವ; ಪ್ರಕೃತಿಗಳನ್ನು ಬಿಡುಗಡೆಗೊಳಸಿದ ಪರಿ ಎಂದು ತಿಳಿಯಬಹುದು. ಆಗಲೇ ಪ್ರಾಣೇಶಚಾರ್ಯರಿಗೆ ತನ್ನಯೋಚನಾ ಮಾರ್ಗದ ದಾರಿಯ ಚಿಂತನೆಗೆ ಎಡೆ ಮಾಡಿಕೊಡುತ್ತದೆ.

ಚಂದ್ರಿಯೊದಿಗಿನ ಸಮಾಗಮದಲ್ಲಿ ಪ್ರಾಣೇಶಚಾರ್ಯನೊಳಗೆ ಸಪ್ತವಾಗಿದ್ದ ನಾರಣಪ್ಪನ ಮೂಲ ಸ್ವಬಾವದ ಅನಾವರಣವಾಗುತ್ತದೆ. ತನ್ನ ಉದಾತ್ತತೆಯು ಕಳಚಿಹೋಗುತ್ತದೆ. "ನಾಳೆ ನನಗೆ ಧೈರ್ಯ ಬಾರದಿದ್ದರೆ ನೀನೇ ಹೇಳಬಿಡಬೇಕು. ನನ್ನ ಮಟ್ಟಿಗೆ ಸಂಸ್ಕಾರ ಮಾಡಲು ನಾನು ಸಿದ್ಧ ಉಳಿದ ಬ್ರಾಹ್ಮಣರಿಗೆ ಹೇಳುವ ಅಧಿಕಾರ ನನಗೆ ಇಲ್ಲ ಅಷ್ಟೆ" ಎಂಬಲ್ಲಿ ಪ್ರಾಣೇಶಾಚಾರ್ಯನಲ್ಲಿ ತನ್ನ ಕ್ರಿಯೆಗೆ ಜವಾಬ್ದಾರನಾಗುವ ಅಸ್ತಿತ್ವ ಯಾವುದು ಎಂಬುದು ಪೂರ್ವ ನಿಶ್ಚಯ ಮತ್ತು ಹೊಣೆಗಾರಿಕೆಯಲ್ಲಿ ದ್ವಂದ್ವವಾಗಿಯೇ ಉಳಿಯುತ್ತದೆ. ಅಸ್ತಿತ್ವವೇ ದ್ವಂದ್ವಗಳಿಂದ ಕೂಡಿದ ಸ್ಥಿತಿಯಾಗಿದೆ. ವಾಸ್ತವವನ್ನು ಅನುಭವಿಸಬೇಕಾದ ಸಂಧರ್ಭದಲ್ಲಿ ಪರಂಪರೆಯ ಮಿತಿಗಳನ್ನು ಅರಿಯುವ ಮತ್ತು ಆ ಮಿತಿಗಳನ್ನು ಮೀರುವಾಗ ಅನುಭವಿಸಿದ ತಳಮಳ ಪ್ರಾಣೇಶಾಚಾರ್ಯನಲ್ಲಿ ತನ್ನ ಬದುಕಿಗೆ ತಾನೇ ಜವಾಬ್ದಾರನಾಗುವ ಕ್ರಿಯೆಯ ಜೊತೆಗೆ ತನ್ನನ್ನು ಮರುಕಟ್ಟಿಕೊಳ್ಳುವಿಕೆಯೂ ಆಗಿದೆ. ತಾನು ಒಪ್ಪಿಕೊಂಡ ಪರಂಪರೆ ಮತ್ತು ಆದರ್ಶ ಮೌಲ್ಯಗಳು ಸುಳ್ಳಾಗಿ, ವಾಸ್ತವದಲ್ಲಿ ಚಂದ್ರಿಯೊಂದಿಗಿನ ಸಮಾಗಮವಾಗಿದೆ. ಚಂದ್ರಿ ಮೂಲತಃ ನಾರಣಪ್ಪನ ಸೂಳೆ. ಸೂಳೆಯೊಂದಿಗೆ ಸಂಬಂಧ ಪರಂಪರೆಯ ಒಳಗೆ ನಿಷಿದ್ದ.ಪರಂಪರೆಯ ಪೊರೆ ಕಳಚಿದ ಪ್ರಾಣೇಶಾಚಾರ್ಯ ಅದರ ಪೂರ್ಣ ಜವಾಬ್ದಾರಿ ಹೊರಲು ತಯಾರಾಗುವುದು ಪುಟ್ಟನ ಸಹವಾಸದಲ್ಲಿ. ಇಲ್ಲಿ ಅಳಕು, ಆತ್ಮವಂಚನೆ, ಸೋಲು, ಭಯ ಮತ್ತು ಅಂಜಿಕೆಗಳನ್ನು ಮರೆಮಾಡಿಕೊಳ್ಳುಲು ಮಾಡುವ ಹೋರಾಟ ಮುಖ್ಯವಾದದ್ದು.

ಪುಟ್ಟನ ಸಹವಾಸದಿಂದ ಊರೂರು ಅಲೆಯುವ ಪದ್ಮಾವತಿಯೊಂದಿಗೆ ಸೇರುವ ಬಯಕೆಗಳೊದಿಗೆ ಆಚೆಯಲ್ಲಿ ಪ್ರಾಣೇಶಾಚಾರ್ಯ ತನ್ನನ್ನು ಅರಿಯುವ ಪ್ರಯತ್ನವಿದೆ. "ನಾರಣಪ್ಪನ ಶವಸಂಸ್ಕಾರದ ಹೊಣೆ ಹೊರಬೇಕು, ನಾನು ಉದಾತ್ತವಾಗಿ ಬೆಳೆದ ಅಗ್ರಹಾರದ ಬ್ರಾಹ್ಮಣರ ಕಣ್ಣೆದುರಿನಲ್ಲಿಯೆ ಇರಬೇಕು. ಗರುಡ, ಲಕ್ಷಣರನ್ನು ಕರೆದು ಹೇಳಬೇಕು ಹೇಗಾಯಿತು, ತನ್ನ ನಿಶ್ಚಯ ಹೀಗೆ. ನಿಮ್ಮ ಕಣ್ಣೆದುರಿನಲ್ಲಿ ಉದಾತ್ತ ವ್ಯಕ್ತಿತ್ವ ಕಳೆದುಕೊಳ್ಳಬೇಕು" ಎನ್ನುವ ಪೂರ್ವ ನಿಶ್ಚಿತವಾದ ಕ್ರಿಯೆ. "ಬರಿಯೊಂದು ವಸ್ತುವಿಗಾಗಿ ಬಿಟ್ಟು ನಾನು ನಿಶ್ಚಿತ ಕ್ರಿಯೆಯ ಮೂಲಕ ಮನುಷ್ಯನಾಗುತ್ತಾನೆ. ನನ್ನ ಜೀವನಕ್ಕೆ ಜವಾಬ್ದಾರನಾಗುತ್ತಾನೆ" ಎನ್ನುವ ಅನುಭವ, ಅಸ್ತಿತ್ವದ ಬೆಳವಣಿಗೆ ಮತ್ತು ಕಟ್ಟಿಕಳ್ಳುವಿಕೆಯನ್ನು ಬಹಿರಂಗಗೊಳಿಸುತ್ತದೆ. "ಇರುವಿಕೆಯನ್ನು ತ್ಯಜಿಸಿ ಆಗುವಿಕೆಯನ್ನು ಆಯ್ಕೆ ಮಾಡಿಕೊಂಡದ್ದು" ಎನ್ನುವ ವಾಕ್ಯವು ಜವಾಬ್ದಾರಿಯ ಮೂಲಕ ಮನುಷ್ಯನಾಗುವಿಕೆಯನ್ನು ತಿಳಿಸುತ್ತದೆ. ಆಗ ಮನುಷ್ಯ ಸ್ವಾತಂತ್ರ್ಯದ ಸ್ಥಿತಿಯನ್ನು ಅನುಭವಿಸುತ್ತಾನೆ. ಸಂಸ್ಕಾರದ ಪ್ರೇತತ್ವ, ರಾಕ್ಷಸತ್ವ, ಮಾನವತ್ವಗಳು ಈ ಮೂಲಕ ತಮ್ಮ ಸ್ವಭಾವತಃ ಅಸ್ಥಿತ್ವ ಪಡೆಯುವುದನ್ನು ಕಾಣಬಹುದು.

ಸಂಸ್ಕಾರ ಕಾದಂಬರಿಯಲ್ಲಿ ಅತಿಯಾದ ಸಂಪ್ರದಾಯ ಮತ್ತು ಆಧುನಿಕತೆ ಎರಡು ಅವನತಿಯ ಹಾದಿಯನ್ನು ಸೇರುತ್ತವೆ. ಒಂದನ್ನೊಂದು ಅನುಸಂಧಾನದ ಮೂಲಕ ಬದುಕು ಸುಶ್ರವ್ಯಾವಾಗುತ್ತದೆ. ಸಂಪ್ರದಾಯದಲ್ಲಿ ಸವಾಲಾದ ಸಮಸ್ಯೆಯನ್ನು ಆಧುನಿಕತೆ ಪರಿಹಾರವಾಗಿ ಸಿಗುತ್ತದೆ ಕಥಾನಾಯಕನಾದ ಪ್ರಾಣೇಶಾಚಾರ್ಯನು ಕೂಡ ಇವೆರಡರ ಮಧ್ಯೆ ಸಿಲುಕಿ ಬದಲಾವಣೆಯ ಹಾದಿಯನ್ನು ಕಾಯುತ್ತಾ ನಿಲ್ಲುತ್ತಾನೆ.

**ಆಕರಗ್ರಂಥ**

ಸಂಸ್ಕಾರ ಕಾದಂಬರಿ – ಯು.ಆರ್ಅನಂತಮೂರ್ತಿ

**ಪರಾಮರ್ಶನಗ್ರಂಥಗಳು**


1. ದಲಿತ ಸಾಹಿತ್ಯ ಮತ್ತುಇತರೆ ಲೇಖನಗಳು – ದೇವಯ್ಯ ಹರವೆ
2. ಸೀಮಾತೀತ ಕನ್ನಡ ಸಾಹಿತ್ಯಚರಿತ್ರೆ(ಸಂ–2) – ಪ್ರೊಅರವಿಂದ ಮಾಲಗತ್ತಿ
3. ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ – ಡಾ.ಅರವಿಂದಮಾಲಗತ್ತಿ
4. ಪರಸ್ಪರ – ಡಾ.ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ